

ಓ.ಎಲ್. ನಾಗಭೂಷಣ ಸ್ವಾಮಿ

# ಶಬ್ದದ ಲಜ್ಜೆ, ಶಬ್ದದ ಸೂತಕ ಮತ್ತು ಶಬ್ದದ ಶಕ್ತಿ

ಯು.ಆರ್. ಅನಂತಮೂರ್ತಿಯವರ 'ಮಾತು ಸೋತ ಭಾರತ' ಪ್ರಕಟವಾದದ್ದು 2007ರಲ್ಲಿ. ಭಾರತದಲ್ಲಿ ಇನ್ನು ಸಂವಾದ ಸಾಧ್ಯವಾಗದಿರಬಹುದು ಎಂಬ ಆತಂಕ ಆ ಪುಸ್ತಕದ ಪ್ರಬಂಧಗಳಲ್ಲಿತ್ತು. ಸುಮಾರು ಇಪ್ಪತ್ತು ವರ್ಷಗಳ ನಂತರ ಬಂದಿರುವ, ನಿತ್ಯಾನಂದ ಬಿ. ಶೆಟ್ಟಿಯವರ 'ಅಳವು ಅರಿಯದ ಭಾಷೆ' ಆ ಪುಸ್ತಕದ ಹತ್ತಿರದ ಸಂಬಂಧಿ. ಭಾಷೆಯನ್ನು ಮಾತ್ರವಲ್ಲ ಭಾಷೆಯ ಮೂಲಕ ಬದುಕನ್ನು ನಾವೇಕೆ ಹೀಗೆ ಹಾಳುಗೆಡವುತ್ತಿದ್ದೇವೆ ಎಂದು ನಮ್ಮ ಕಾಲದ ಮನಸುಳ್ಳ ಜನ ಗಾಢವಿಷಾದದಲ್ಲಿ ನಡೆಸಿರುವ ಆತ್ಮಾವಲೋಕನ ಇದು.

ಭಾಷೆಯು ವ್ಯಕ್ತಿತ್ವವನ್ನು ರೂಪಿಸುತ್ತದೆ, ಭಾಷೆಯ ಮೂಲಕವೇ ವಾಸ್ತವವನ್ನು ಕಟ್ಟುತ್ತೇವೆ, ಅರಿಯುತ್ತೇವೆ. ಭಾಷೆಯ ಮೂಲಕವೇ ನಮ್ಮ ಬದುಕಿನಲ್ಲಿ ಪ್ರೀತಿ, ಒಳಿತು ಎಲ್ಲವೂ ಬೆಳೆಯುತ್ತವೆ. ಭಾಷೆಯ ಶಕ್ತಿಯನ್ನು ಅರಿಯದೆ, ದ್ವೇಷದ ಹತ್ಯಾರವಾಗಿ ಭಾಷೆಯನ್ನು ಬಳಸುತ್ತ ಮುಂದಿನ ಹಲವು ಪೀಳಿಗೆಗಳ ಬದುಕೂ ವಿಷವಾಗುವ ಹಾಗೆ ಸಾಗುತ್ತಿರುವ ನಮ್ಮ ಕಾಲಮಾನದ ವರ್ತನೆಯ ಚಿತ್ರಣ ಈ ಬರಹದಲ್ಲಿದೆ.

ಭಾಷೆಯ ಶಕ್ತಿಯನ್ನು ಅರಿಯದೆ ದುಂದು ಮಾಡಿದರೆ ಏನಾದೀತು ಎಂದು ತಾತ್ವಿಕವಾಗಿ ವಿವರಿಸುವ ಅಲ್ಲಮನ ವಚನ ಈ ಪುಸ್ತಕ ನಾಂದಿಪದವಾಗಿದೆ. 'ಕನ್ನಡವೆಂದರೆ' ಎಂಬ ಹೆಸರಿನ (ಅಥವಾ ಯಾವುದೇ ಭಾಷೆಯೆಂದರೆ, ಯಕ್ಷಗಾನವೆಂದರೆ, ಭಾರತವೆಂದರೆ ಎಂದೂ ಓದಬಹುದಾದ) ಅಡಿಗರ ಕವಿತೆ ಭಾಷೆಯು ಏನೆಲ್ಲ ಹೌದು, ಏನೆಲ್ಲ ಆಗಬಹುದು ಎಂಬ ಸೂಚನೆಯನ್ನು ಕೊಡುವ ಭರತಪದವಾಗಿದೆ. ನಾಂದಿ ಮತ್ತು ಭರತ ಪದಗಳು ಭಾಷೆಯ ದುರ್ಬಳಕೆಯ ವಿಷಾದದ ವಾಸ್ತವ ಮತ್ತು ಉಜ್ವಲ ಸಾಧ್ಯತೆಯ ತಾತ್ವಿಕ ಚೌಕಟ್ಟನ್ನು ಈ ಪುಸ್ತಕಕ್ಕೆ ಒದಗಿಸಿವೆ.

'ಒಂದು ಬಗೆಯ ನಾಟಕೀಯತೆ ಮತ್ತು ಯಕ್ಷಗಾನೀಯತೆ'ಗಳೊಡನೆ 'ಕಲೆಯ ರೀತಿಯನ್ನು, ಸಮಾಜದ ನೀತಿಯನ್ನು, ಮತ್ತು ಈ ರೀತಿ–ನೀತಿಗಳ ಆಯಕಟ್ಟುಗಳನ್ನು ಮರುಕಟ್ಟುವ ಮೌಲಿಕ ರಾಜಕಾರಣ'ದ ನುಡಿಯಾಟ, ನುಡಿಕೂಟವನ್ನು ನಿತ್ಯಾನಂದ ಶೆಟ್ಟಿ ಕಟ್ಟಿದ್ದಾರೆ. ಇದು ಯಕ್ಷಗಾನ ಮತ್ತು ತಾಳಮದ್ದಳೆಗಳ ಲಕ್ಷಣವಿರುವ ಕೃತಿ.